ಅತಿ ಸಣ್ಣ ಕತೆ

ಎಸ್. ಸುರೇಂದ್ರನಾಥ್

# ಇದೂ ಒಂದು ಕತೆ

ಅವನು ಮಲಗಿ ಇವತ್ತಿಗೆ ಏಳು ದಿನಗಳಾಗಿವೆ. ವಾರದ ಹಿಂದೆ ಒಂದು ದಿನ ಬೆಳಿಗ್ಗೆ ಎದ್ದಾಗ ತಲೆನೋವು ಎಂದವನು ಮತ್ತೆ ಮಲಗಿ ಎದ್ದಾಗ ತಲೆನೋವು ಇಮ್ಮಡಿಯಾಗಿತ್ತು. ಹಾಗೇ ಮಲಗಿದ. ಮಲಗೇ ಇದ್ದ. ಒಂದೆರಡು ದಿನಗಳಲ್ಲಿ ಹಾಸಿಗೆ ಬಿಟ್ಟು ಏಳಲೂ ಆಗದಷ್ಟು ನಿಶ್ಶಕ್ತಿ. ಮೂರೇ ದಿನಗಳಲ್ಲಿ ಮೈಯ್ಯಲ್ಲಿನ ರಕ್ತವೆಲ್ಲಾ ಬಸಿದು ಹೋದಂತಾಗಿ ಬೆಳ್ಳಗಾಗಿಬಿಟ್ಟ. ತಲೆನೋವು ಇತ್ತೀಚೆಗೆ ನೂರ್ಮಡಿಯಾಗಿತ್ತು. ಅಸಾಧ್ಯ ತಲೆನೋವು. ಆತನ ನರಳಾಟ ಈಗ ಸುತ್ತಮುತ್ತಲಿನ ಮನೆಗಳಿಗೂ ಕೇಳುವಂತಾಗಿದೆ. ದಿನಕ್ಕೆರಡು ಸಾರಿ ತಪಾಸಣೆ ಮಾಡುತ್ತಿದ್ದ ಡಾಕ್ಟರಿಗೂ ಕಾರಣ ತಿಳಿಯುತ್ತಿಲ್ಲ. ರಕ್ತ ಮಾತ್ರ ಬಸಿದು ಹೋಗುತ್ತಿದೆ. ಇದಾವ ರೋಗ, ಇದಕ್ಕೇನು ಮದ್ದು ಯಾವುದೂ ತಿಳಿಯುತ್ತಿಲ್ಲ. ಮನೆ ಮಂದಿಯೆಲ್ಲಾ ಅವನು ಬದುಕುವ ಆಸೆ ಬಿಡುವಂತಾಯಿತು. ನಿನ್ನೆ ಮೊನ್ನೆಯಿಂದ ಅವನ ಹಾಸಿಗೆ ಸುತ್ತ ನೆರೆಯುತ್ತಿದ್ದ ಜನ ಕೂಡಾ ಕಮ್ಮಿಯಾಗಿದ್ದಾರೆ. ಈತ ಅಸ್ಪಷ್ಟವಾಗಿ ಗೋಗರೆದರೆ ಒಂದು ನಿಲ್ಲುತ್ತಾರೆ. ಅವನಿರುವ ರೂಮನ್ನ ನೋಡಲೂ ಆಗುತ್ತಿಲ್ಲ. ಹಾಸಿಗೆಯಂತೂ ಕೊಪ್ಪೆಯಾಗಿದೆ. ನಿಧಾನವಾಗಿ ಅವನ ಕಂಕುಳಿಗೆ ಕೈ ಹಾಕಿ ಎಬ್ಬಿಸಿ, ಅತ್ತ ಕಡೆ ಕುರ್ಚಿಯ ಮೇಲೆ ಕೂಡಿಸಿದರು. ಹಾಸಿಗೆಯ ಹೊದಿಕೆಯನ್ನು ತೆಗೆದು ಬೇರೊಂದನ್ನು ಹೊದಿಸಿದರು. ದಿಂಬು ಎತ್ತಲು ಹೋದಲ್ಲಿ ಮಣ ಭಾರ. ಅಲ್ಲಲ್ಲೇ ರಕ್ತದ ಹನಿಗಳ ಕಲೆಗಳು. ಎತ್ತಿ ಕೊಡವಿದರು. ಥೊಪ್ಪೆಂದು ಏನೋ ಬಿತ್ತು. ನೋಡಿದರು. ಒಂದು ತಿಗಣೆ. ಸುಮಾರು ಏಳೆಂಟು ಇಂಚಿನಷ್ಟು ದೊಡ್ಡದು. ಒಂದು ಆರೇಳು ಕಿಲೋ ತೂಗುತ್ತಿತ್ತೋ ಏನೋ. ನೆಲದ ಮೇಲೆ ಬಿದ್ದೊಡನೆಯೇ, ತುಂಬಿದ ಹೊಟ್ಟೆಯಲ್ಲಿ ನಿಧಾನವಾಗಿ ತೆವಳುತ್ತಾ ರೂಮು ಬಾಗಿಲು ದಾಟಿ, ನಂತರ ಮನೆ ಬಾಗಿಲು ದಾಟಿ ಬೀದಿಗಿಳಿದು ಕಣ್ಣರೆಯಾಯಿತು. ಎಲ್ಲಿ ಹೋಯಿತೋ ಏನೋ... ಇವನು ಹೊಸದಾಗಿ ತಯಾರಾದ ಹಾಸಿಗೆಯ ಮೇಲೆ ಮಲಗಿದ.



**ಎಸ್. ಸುರೇಂದ್ರನಾಥ್**

ಹುಟ್ಟಿದ್ದು ಮೂಡುಬಿದಿರೆಯಲ್ಲಿ. 'ಹುಲಗೂರ ಹುಲಿಯವ್ವ', 'ಮರ್ಯಾದೆ ಪ್ರಶ್ನೆ', 'ನೀ ನಾನಾದ್ರೆ ನಾ ನೀನೇನಾ', 'ಜನತೆಯ ಶತ್ರು', 'ಒಂದು ಆಕಸ್ಮಿಕ ಸಾವು', 'ನಾ ತುಕಾರಾಮ್ ಅಲ್ಲ', 'ಸಂಕ್ರಮಣ', ಸೇರಿದಂತೆ ಅನೇಕ ನಾಟಕಗಳನ್ನು ಬರೆದು ನಿರ್ದೇಶಿಸಿದ್ದಾರೆ. 'ಕಟ್ಟು ಕತೆಗಳು', 'ತಾಪತ್ರಯ' ಎಂಬ ಕಥಾಸಂಕಲನಗಳು, 'ಎನ್ನ ಭವದ ಕೇಡು', 'ಗಾಳಿಗೆ ಬಿದ್ದ ಚಂದ್ರನ ತುಂಡುಗಳು' ಎಂಬ ಕಾದಂಬರಿಗಳು ಪ್ರಕಟವಾಗಿವೆ.

ಕಲೆ: ವಾಗೀಶ ಹೆಗಡೆ